# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 208 | Pages. 2 | Date: 28-07-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 208 - ಪುಟಗಳು : 2 | 28-07-2026 | ಮಂಗಳವಾರ | Ph: 8762954248 | ದರ : ₹1


# ಕಾವೇರಿ ವಿವಾದ: ಶಾಶ್ವತ ಪರಿಹಾರ ಕಂಡುಕೊಳ್ಳಿ

## ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ ಆಗ್ರಹ । ರೈತರ ಹಿತಾಸಕ್ತಿ ಕಾಪಾಡಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕಾವೇರಿ ನದಿ ನೀರಿನ ಹಂಚಿಕೆ ವಿವಾದವನ್ನು ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಪರಸ್ಪರ ಚರ್ಚಿಸಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವುದು ಒಳಿತು ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಕರ್ನಾಟಕದಲ್ಲಿರುವ ಈಗಿನ ಪರಿಸ್ಥಿತಿ, ಮಳೆ ಮತ್ತು ಅಣೆಕಟ್ಟೆಗಳ ನೀರಿನ ಸ್ಥಿತಿಗತಿ ನೋಡಿದರೆ ತಮಿಳುನಾಡಿಗೆ ಸದ್ಯಕ್ಕೆ ನೀರು ಬಿಡಲು ಆಗುವುದಿಲ್ಲ. ಈ ವಿಚಾರದಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ನಿರ್ದೇಶನ ಸರಿಯಾಗಿದೆ ಎಂದರು.

ಶೀಘ್ರವೇ ಎರಡೂ ರಾಜ್ಯಗಳ ಸಿಎಂಗಳು ಮುಖಾಮುಖಿಯಾಗಲಿದ್ದಾರೆ ಎಂಬ ಮಾಹಿತಿ ಇದೆ. ಆ ಸಂದರ್ಭದಲ್ಲಿ ಪರಸ್ಪರ ಮಾತುಕತೆ ನಡೆಯಲಿ, ಸಮರ್ಪಕ ಮಳೆಯಾಗದೆ ಕರ್ನಾಟಕದ ಡ್ಯಾಂಗಳಲ್ಲಿ ನೀರಿಲ್ಲದ ಕಾರಣ, ಪ್ರತಿವರ್ಷ 205 ಟಿಎಂಸಿ ನೀರು ಹರಿಸಬೇಕು ಎಂಬ ಆದೇಶವಿದ್ದರೂ, ಈಗ ನೀರು ಹರಿಸುವುದು ಅಸಾಧ್ಯ ಎಂದರು.

ಮುಂದಿನ ದಿನಗಳಲ್ಲಿ ನೀರು ಹೇಗೆ ಬಳಕೆ ಮಾಡಬೇಕು ಎಂಬುದರ ಬಗ್ಗೆ ಚರ್ಚೆ ಆಗಲಿ, ಈ ಮೂಲಕ ಹಲವು ವರ್ಷಗಳ ವಿವಾದ ಬಗೆಹರಿದರೆ ಒಳಿತು, ಏಕೆಂದರೆ ಇದು ಮುಂದಿನ ಪೀಳಿಗೆಗೆ ಶಾಪ ಆಗಬಾರದು. ಆದಷ್ಟು ಬೇಗ ವಿವಾದ ಬಗೆ ಹರಿದರೆ, ಒಳ್ಳೆಯದಾಗಲಿದೆ. ಈ ನಿಟ್ಟಿನಲ್ಲಿ



ಸಿಎಂ ಡಿ.ಕೆ.ಶಿವಕುಮಾರ್ ಮತ್ತು ವಿಜಯ್ ಅವರು ಯೋಚಿಸಲಿ. ಸಂಘರ್ಷ ಹೀಗೆಯೇ ಮುಂದುವರಿಯದರೆ ಮಾತುಕತೆ ಮೂಲಕವೇ ಬಗೆಹರಿಸದರೆ ಒಳಿತು ಎಂದು ಅಭಿಪ್ರಾಯಪಟ್ಟರು.

### ಕಾಕ್ರೋಚ್‌ಗೆ ಕರವೇ ಬೆಂಬಲ

ನೀಟ್ ಹಗರಣ ಕುರಿತು ಮಾತನಾಡಿದ ನಾರಾಯಣಗೌಡ ಅವರು, ಪ್ರಶ್ನೆಪತ್ರಿಕೆ ಸೋರಿಕೆಯಿಂದ ಮನನೊಂದು 21 ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದು ವಿಷಾದನೀಯ. ಕೇಂದ್ರ ಸರ್ಕಾರ ಕೂಡಲೇ ಯಾರೆಲ್ಲ ತಪ್ಪು ಮಾಡಿದ್ದಾರೋ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು.

ಮೃತ ಮಕ್ಕಳ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ನೀಟ್ ಅಕ್ರಮದಲ್ಲಿ ಆಗಿರುವ ಲೋಪದೋಷ ಸರಿಪಡಿಸಿ, ಶಿಕ್ಷಣ ವ್ಯವಸ್ಥೆಯನ್ನು ಸರಿದಾರಿಗೆ ತೆಗೆದುಕೊಂಡು ಹೋಗದೇ ಇದ್ದರೆ ಇಂಥದೇ ಹಗರಣಗಳಿಂದಾಗಿ ಮತ್ತೆ ವಿದ್ಯಾರ್ಥಿಗಳು ಸಾವಿನ ಹಾದಿ ಹಿಡಿಯಬಹುದು. ಅದು ಮರುಕಳಿಸುವುದು ಬೇಡ, ವಿದ್ಯಾರ್ಥಿಗಳೂ ಬೇಡಿಕೆ ಈಡೇರಿತು ಎಂದು ವಿರಮಿಸಬಾರದು ಎಂದರು.

ಹಾಗೆಯೇ ವಿದ್ಯಾರ್ಥಿ ಚಳವಳಿಯಲ್ಲಿ ರಾಜಕೀಯ ಬೆರೆಯಬಾರದು, ಬೆರೆತರೆ ಚಳವಳಿ ಸಾಯಲಿದೆ ಎಂದ ಅವರು, ಕಾಂಗ್ರೆಸ್ ಪಕ್ಷ ಸಹ ಈ ಜಯ ನಮ್ಮದು ಎಂದುಕೊಳ್ಳಬಾರದು. ನಮಗೆ ಲಾಭ ತಂದುಕೊಟ್ಟಿತು ಎಂದುಕೊಳ್ಳಬಾರದು. ರಾಜಕೀಯ ಶಕ್ತಿ ಹೊರಗಿಟ್ಟು ಬೆಂಬಲ ನೀಡಬೇಕೇ ಹೊರತು ಚಳವಳಿ ಒಳ ಹೊಕ್ಕಿ ದಾರಿ ತಪ್ಪಿಸಬಾರದು ಎಂದರು.

### ಮೊದಲೇ ರಾಜೀನಾಮೆ ನೀಡಬೇಕಿತ್ತು

ಆರಂಭದಲ್ಲಿ ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಹೋರಾಟವನ್ನು ನಿರ್ಲಕ್ಷ್ಯ ಮಾಡಿತು. ವಿಳಂಬವಾಗಿ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ್ದಾರೆ. ಮೊದಲೇ ಆ ಕೆಲಸವನ್ನು ಅವರು ಮಾಡಬೇಕಿತ್ತು. ಆದರೂ ಅನ್ಯಾಯ, ಅಕ್ರಮ ಸರಿಪಡಿಸುವ ಕೆಲಸ ಆಗಬೇಕು. ಮನ್ ಕೀ ಬಾತ್‌ನಲ್ಲಿ ಅನೇಕ ವಿಚಾರಗಳ ಬಗ್ಗೆ ಮಾತನಾಡುವ ಪ್ರಧಾನಿ ಅವರು, ನೊಂದ ವಿದ್ಯಾರ್ಥಿಗಳಿಗೆ ಮತ್ತವರ ಪೋಷಕರಿಗೆ ಸಾಂತ್ವನ, ಸಮಾಧಾನದ ಜೊತೆಗೆ ಸೂಕ್ತ ಭರವಸೆ ನೀಡಬೇಕಿತ್ತು.

ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ಮಾಡುತ್ತಿದ್ದರೂ, ಮಂತ್ರಿ ರಕ್ಷಣೆಗೆ ನಿಂತಿದ್ದು ನಾಚಿಕೆಗೇಡು. ಕಡೆಗೂ ವಿದ್ಯಾರ್ಥಿಗಳ ಹೋರಾಟಕ್ಕೆ ಜಯ ಸಿಕ್ಕಿದೆ. ಹಾಗಂತ ಸುಮ್ಮನೆ ಕೂರಬಾರದು ಎಂದು ನಾರಾಯಣಗೌಡ ಎಚ್ಚರಿಸಿದರು.

ಕರವೇ ಸಹ ಈ ರೀತಿಯ ಮುಂದಿನ ಹೋರಾಟಗಳಿಗೆ ಬೆಂಬಲ ನೀಡಲಿದೆ ಎಂದು ಘೋಷಿಸಿದರು. ನಮ್ಮ ಹೋರಾಟ ಯಾವುದೇ ಪಕ್ಷ ಅಥವಾ ವ್ಯಕ್ತಿ ಪರವಾಗಿ ಅಲ್ಲ ಎಂದರು.

ಇದೇ ವೇಳೆ ನೀಟ್ ಹೋರಾಟ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮೇಲೆ ಹಾಕಿರುವ ಎಲ್ಲ ಕೇಸ್‌ಗಳನ್ನು ವಾಪಸ್ ಪಡೆಯಬೇಕು. ಮೃತ 21 ವಿದ್ಯಾರ್ಥಿಗಳ ಕುಟುಂಬಕ್ಕೆ ಕೇಂದ್ರದಿಂದ ಕೂಡಲೇ ಪರಿಹಾರ ಕೊಡಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆಗೆ ಕೈಜೋಡಿಸಿದವರ ಮೇಲೆ ಕ್ರಮ ಆಗಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ವಿವಿಧ ಪ್ರಶಸ್ತಿ ಕೊಡುವಾಗ ನಿಜವಾದ ಸಾಧಕರನ್ನು ಪರಿಗಣಿಸಬೇಕು. ಇತ್ತೀಚಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಲಾಬಿಗೆ ಮಣಿದು ಪ್ರಶಸ್ತಿ ನೀಡುವ ಹಂತಕ್ಕೆ ಬಂದಿವೆ.

ಅದು ಆಗಬಾರದು, ಶಾಸಕರು ಅಥವಾ ಮಂತ್ರಿಗಳ ಒತ್ತಡಕ್ಕೆ ಅಥವಾ ಶಿಫಾರಸ್ಸಿಗೆ ಮಣಿದು ಪ್ರಶಸ್ತಿ ಕೊಡಬಾರದು. ಎಲ್ಲ ಕ್ಷೇತ್ರಗಳ ಸಾಧಕರ ಗುರುತಿಸಿ ಪ್ರಶಸ್ತಿ ಕೊಡಬೇಕು. ಯೋಗ್ಯ ಮತ್ತು ಯೋಗ್ಯತೆ ಇರುವ ಸಾಧಕರಿಗೆ ಗೌರವ ಸಲ್ಲಬೇಕು. ಎಲ್ಲ ಕ್ಷೇತ್ರಗಳ ನೈಜ ಸಾಧಕರಿಗೆ ಗೌರವ ಸಿಗಬೇಕು. ಹಾಗಾದರೆ ಪ್ರಶಸ್ತಿಯ ಮೌಲ್ಯ ಹೆಚ್ಚಾಗಲಿದೆ ಎಂದು ನುಡಿದರು.

ಮುಂದೆಯಾದರೂ ಈ ಪರಂಪರೆ ಮುಂದುವರಿಯಲಿ ಎಂದರು.

ಕರವೇ ಜಿಲ್ಲಾಧ್ಯಕ್ಷ ಸಿ.ಡಿ.ಮನುಕುಮಾರ್ ಮೊದಲಾದವರಿದ್ದರು.

---

## ಮದ್ಯಪಾನ ಜೀವನವನ್ನೇ ಹಾಳು ಮಾಡುತ್ತದೆಂಬ ಅರಿವಿರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮದ್ಯಪಾನವು ವ್ಯಕ್ತಿಯ ಆರೋಗ್ಯ, ಕುಟುಂಬದ ನೆಮ್ಮದಿ ಹಾಗೂ ಸಾಮಾಜಿಕ ಬದುಕನ್ನು ಹಾಳು ಮಾಡುವ ದುಶ್ಚಟವಾಗಿದೆ. ಅದರಿಂದ ದೂರವಿರುವ ಮೂಲಕ ಸುಖ, ಶಾಂತಿ ಮತ್ತು ಗೌರವಯುತ ಜೀವನ ಕಟ್ಟಿಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಮಾಜಿ ರಾಜ್ಯಾಧ್ಯಕ್ಷ ಸತೀಶ್ ಹೊನ್ನವಳ್ಳಿ ಹೇಳಿದರು.

ನಗರದ ಎಂ.ಜಿ.ರಸ್ತೆಯ ಕುರುಹಿನ ಶೆಟ್ಟಿ ಸಭಾ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಧರ್ಮಸ್ಥಳ ಮಂಜುನಾಥೇಶ್ವರ ವ್ಯಸನಮುಕ್ತ ಮತ್ತು ಸಂಶೋಧನಾ ಕೇಂದ್ರದಿಂದ ಆಯೋಜಿಸಿದ್ದ 2092ನೇ ಮದ್ಯ ವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಮದ್ಯಪಾನದಿಂದ ವ್ಯಕ್ತಿಯ ಆರೋಗ್ಯ ಮಾತ್ರವಲ್ಲ,



ಕುಟುಂಬದ ವಿಶ್ವಾಸ, ಸಾಮಾಜಿಕ ಗೌರವ ಹಾಗೂ ಸಂಬಂಧಗಳೂ ಹಾಳಾಗುತ್ತವೆ. ಹಣವಿದ್ದಾಗ ಅನೇಕರು ಸ್ನೇಹಿತರಾಗಿರುತ್ತಾರೆ. ಆದರೆ ಸಂಕಷ್ಟದ ಸಂದರ್ಭದಲ್ಲಿ ಕುಟುಂಬದಿಂದ ಮಾತ್ರ ಬೆಂಬಲ ದೊರೆಯುತ್ತದೆ. ಆದ್ದರಿಂದ ಜೀವನವನ್ನು ಹಾಳು ಮಾಡುವ ದುಶ್ಚಟಗಳಿಂದ ಹೊರಬಂದು ಕುಟುಂಬದೊಂದಿಗೆ ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಎ.ಯೋಗೇಶ್ ಮಾತನಾಡಿ, 1993ರಲ್ಲಿ ದುಶ್ಚಟ ಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕಾರ್ಯಾರಂಭ ಮಾಡಿತು. ಆರಂಭದಿಂದಲೇ ಮದ್ಯಪಾನದ ವಿರುದ್ಧ ಜಾಗೃತಿ ಮೂಡಿಸುವ ಜೊತೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಮದ್ಯಪಾನ ನಿಯಂತ್ರಣಕ್ಕೆ ಒತ್ತಾಯಿಸಲಾಗಿತ್ತು. 1996-98ರ ಅವಧಿಯಲ್ಲಿ ರಾಜ್ಯಾದ್ಯಂತ ಮದ್ಯ ನಿಷೇಧ ಜಾರಿಗೆ ತರಬೇಕೆಂದು ವ್ಯಾಪಕ ಹೋರಾಟ ನಡೆಸಲಾಗಿತ್ತು ಎಂದರು.

ಧರ್ಮಸ್ಥಳದ ಮದ್ಯವರ್ಜನ ಶಿಬಿರಗಳು ಸಾವಿರಾರು ಕುಟುಂಬಗಳಲ್ಲಿ ಹೊಸ ಆಶಾಕಿರಣ ಮೂಡಿಸಿವೆ. ಇದುವರೆಗೆ ಸುಮಾರು 1.35 ಲಕ್ಷಕ್ಕೂ ಹೆಚ್ಚು ಜನರು ವ್ಯಸನದಿಂದ ಮುಕ್ತರಾಗಿ ತಮ್ಮ ಕುಟುಂಬದೊಂದಿಗೆ ಗೌರವಯುತ ಬದುಕು ಸಾಗಿಸುತ್ತಿದ್ದಾರೆ ಎಂದರು.

ಎಂಟು ದಿನಗಳ ಕಾಲ ಶಿಬಿರದಲ್ಲಿ ಪಾಲ್ಗೊಂಡಿದ್ದ ಶಿಬಿರಾರ್ಥಿಗಳು ತಮ್ಮ ಅನುಭವ ಹಂಚಿಕೊಂಡರು.

ಕುರುಹಿನ ಶೆಟ್ಟಿ ಸಂಘದ ಜಿಲ್ಲಾಧ್ಯಕ್ಷ ಕೆ.ಸಿ.ಕೃಷ್ಣಶೆಟ್ಟಿ, ಹಾಸನಾಂಬ ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಕೆ. ಮೋಹನ್ ಕುಮಾರ್, ವಲಯಾಧ್ಯಕ್ಷ ತಿಮ್ಮರಾಯ ಶೆಟ್ಟಿ, ಖಜಾಂಚಿ ಎಲ್.ಎಸ್.ಧರಣಿ, ಕೇಶವಮೂರ್ತಿ, ಕೆ.ಎಸ್. ಯೋಗೇಶ್, ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಸಿ.ಎಸ್. ವಿಜಯ್, ಜೀವನ್ ಗೌಡ, ನಗರ ಬ್ರಾಹ್ಮಣ ಸಭೆ ಅಧ್ಯಕ್ಷ ವೆಂಕಟೇಶ್, ಜನನಿ ಫೌಂಡೇಶನ್ ಸಂಸ್ಥಾಪಕಿ ಭಾನುಮತಿ, ದಯಾನಂದ ಶೆಟ್ಟಿ, ಕ್ಷೇತ್ರ ಯೋಜನಾಧಿಕಾರಿ ಧನಂಜಯ್, ಉದ್ಯಮಿ ಲಕ್ಷ್ಮೀಕಾಂತ್, ನಗರಸಭೆ ಮಾಜಿ ಅಧ್ಯಕ್ಷ ಆರ್.ಮೋಹನ್ ಮೊದಲಾದವರಿದ್ದರು.

---

## ವಿದ್ಯುತ್ ಸಮಸ್ಯೆ ನಿವಾರಿಸಲು ಅಧಿಕಾರಿಗಳಿಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನಲ್ಲಿ ಇತ್ತೀಚೆಗೆ ಉಂಟಾಗಿರುವ ವಿದ್ಯುತ್ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿ, ರೈತರು ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದಲ್ಲಿ ಸೆಸ್ಕ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳೊಂದಿಗೆ ವಿದ್ಯುತ್ ಪೂರೈಕೆ, ಆಗಾಗ್ಗೆ ಉಂಟಾಗುತ್ತಿರುವ ವಿದ್ಯುತ್ ವ್ಯತ್ಯಯ, ಹಾಳಾಗಿರುವ ವಿದ್ಯುತ್ ಪರಿವರ್ತಕಗಳ ಬದಲಾವಣೆ ಹಾಗೂ ಹೊಸ ವಿದ್ಯುತ್ ಲೈನ್‌ಗಳ ಕಾಮಗಾರಿಗಳ ಕುರಿತು ಶಾಸಕರು ಚರ್ಚಿಸಿದರು.

ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ದೂರುಗಳಿಗೆ



ತಕ್ಷಣ ಸ್ಪಂದಿಸಿ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ರೈತರ ಕೃಷಿ ಚಟುವಟಿಕೆಗಳಿಗೆ ನಿರಂತರ ಗುಣಮಟ್ಟದ ವಿದ್ಯುತ್ ಪೂರೈಕೆ ಒದಗಿಸುವಂತೆ ತಿಳಿಸಿದರು.

ಸಿಬ್ಬಂದಿ ಕೊರತೆಯಿಂದ ವಿದ್ಯುತ್ ದುರಸ್ತಿ ಕಾರ್ಯ ವಿಳಂಬವಾಗುತ್ತಿರುವ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು. ಇಲಾಖೆಯಲ್ಲಿ ಖಾಲಿ ಇರುವ ಲೈನ್ ಮ್ಯಾನ್ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡುವಂತೆ ಸರ್ಕಾರದ ಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮಳೆ ಕೊರತೆಯಿಂದ ರೈತರು ಸಂಕಷ್ಟದಲ್ಲಿದ್ದು, ಬೆಳೆಗಳನ್ನು ಉಳಿಸಿಕೊಳ್ಳಲು ನೀರಾವರಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಅತ್ಯಗತ್ಯವಾಗಿದೆ.

ರೈತರಿಗೆ ಸಮಯಕ್ಕೆ ಸರಿಯಾಗಿ ವಿದ್ಯುತ್ ನೀಡದಿದ್ದರೆ ಬೆಳೆ ಉಳಿಸಿಕೊಳ್ಳುವುದು ಕಷ್ಟವಾಗಲಿದೆ ಎಂದು ಶಾಸಕರು ಅಧಿಕಾರಿಗಳ ಗಮನಕ್ಕೆ ತಂದರು.

ಸಭೆಯಲ್ಲಿ ಐಪಿ ಫೀಡರ್ ಸಮಸ್ಯೆ, ಗಂಗಾಕಲ್ಯಾಣ ಯೋಜನೆಯ ವಿದ್ಯುತ್ ಸಂಪರ್ಕಗಳನ್ನು ಶೀಘ್ರ ಅಳವಡಿಸುವುದು, ದಿಡಗ ಭಾಗದಲ್ಲಿ ರೈತರು ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಗಳ ಪರಿಹಾರ ಹಾಗೂ ಸಬ್ಬನಹಳ್ಳಿ ಲಿಂಕ್ ಲೈನ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಂಪರ್ಕ ಕಲ್ಪಿಸುವುದು ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾಹಿತಿ ಪಡೆದರು.

ವಿವಿಧ ಗ್ರಾಮಗಳಿಂದ ಬರುತ್ತಿರುವ ವಿದ್ಯುತ್ ಸಂಬಂಧಿತ ದೂರುಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸಿ, ರೈತರು ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್ ರತ್ನ, ಸಹಾಯಕ ಕಾರ್ಯಪಾಲಕ ಅಭಿಯಂತರ ಹರೀಶ್ ಮತ್ತಿತರರಿದ್ದರು.

---

## ಚ.ರಾ.ಪಟ್ಟಣದ ಸಾಯಿ ಮಂದಿರದಲ್ಲಿ ಗುರುಪೂರ್ಣಿಮೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಜು. 29ರ ಬುಧವಾರ ಗುರುಪೂರ್ಣಿಮೆ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.



ಜು. 28ರ ಮಂಗಳವಾರ ಬೆಳಿಗ್ಗೆ 9 ರಿಂದ ಹೋಮ, ವಿಶೇಷ ಪೂಜೆ, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ. ಬುಧವಾರ ಬೆಳಿಗ್ಗೆ 4.30ಕ್ಕೆ ಕಾಕಡ ಆರತಿ, 5 ಗಂಟೆಗೆ ಅಭಿಷೇಕ, 6ಕ್ಕೆ ಅಲಂಕಾರ ಪೂಜೆ, 7.30 ರಿಂದ 11.30ರ ವರಗೆ ಪ್ರಸಾದ ಮತ್ತು ಫಲಹಾರವಿರುತ್ತದೆ. ಮಧ್ಯಾಹ್ನ 12ಕ್ಕೆ ಆರತಿ, ಮಧ್ಯಾಹ್ನ 1 ಗಂಟೆಗೆ ಅನ್ನದಾನ, ಸಂಜೆ 6 ಗಂಟೆಗೆ ಧೂಪಾರತಿ, ಸಂಜೆ 6.30 ರಿಂದ 9ರ ವರೆಗೆ ಪ್ರಸಾದ ಮತ್ತು ಫಲಹಾರವಿರುತ್ತದೆ. ರಾತ್ರಿ 9 ಗಂಟೆಗೆ ಶೇಜಾರತಿ ಹಾಗು ಬೆಳಗ್ಗೆ 7 ರಿಂದ ರಾತ್ರಿ 11ರ ವರೆಗೆ ಬಾಬಾರಿಗೆ ವಿಶೇಷ ಅಲಂಕಾರವಿರುತ್ತದೆ ಮತ್ತು ಬಾಬಾರ ದರ್ಶನ ಇರಲಿದೆ.

ಭಜನಾ ಕಾರ್ಯಕ್ರಮ: ಬೆಳಗ್ಗೆ 9 ರಿಂದ 10 ಗಂಟೆ ವರೆಗೆ ಶೇಷಾದ್ರಿ ಭಜನಾ ಮಂಡಳಿ, ಬೆಳಗ್ಗೆ 10 ರಿಂದ 11 ಗಂಟೆ ವರೆಗೆ ಬ್ರಾಹ್ಮಣ ಮಹಿಳಾ ವೇದಿಕೆ ವತಿಯಿಂದ ಭಜನಾ ಮಂಡಳಿ, ಬೆಳಗ್ಗೆ 11 ರಿಂದ 12 ರವರಿಗೆ ವಾಸವಿ ಭಜನಾ ಮಂಡಳಿ, ಮಧ್ಯಾಹ್ನ 1 ರಿಂದ 2 ಗಂಟೆ ವರೆಗೆ ಶ್ರೀಮುಖ ಸರಸ್ವತಿ ಕಲಾಕೇಂದ್ರ, ಮಧ್ಯಾಹ್ನ 2 ರಿಂದ 3 ಗಂಟೆ ವರೆಗೆ ಶ್ರೀನಿಧಿ ಭಜನಾ ಮಂಡಳಿ, ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ರೇಣುಕಾ ಭಜನಾ ಮಂಡಳಿ, ಸಂಜೆ 4 ರಿಂದ 5 ಗಂಟೆ ವರೆಗೆ ಓಂಕಾರೇಶ್ವರ ಭಜನಾ ಮಂಡಳಿ ಹಾಗೂ ಸಂಜೆ 5 ರಿಂದ 6 ಗಂಟೆ ವರೆಗೆ ವೆಂಕಟೇಶ್ವರ ಭಜನಾ ಮಂಡಳಿ ವತಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.

ಚನ್ನರಾಯಪಟ್ಟಣದ ಸುಧೀರ್ ಶರ್ಮ ಮತ್ತು ತಂಡದವರಿಂದ ಹೋಮ ಮತ್ತು ಹವನ, ನೂತನ್ ವಾದ್ಯ ವೃಂದ ಮಂಜಪ್ಪ ತಂಡದವರಿಂದ ವಾದ್ಯಗೋಷ್ಠಿ ಜರುಗಲಿದೆ ಎಂದು ಸಾಯಿ ಸೇವಕಿ ಪ್ರಭಾ ಕಾಚೇನಹಳ್ಳಿ ತಿಳಿಸಿದ್ದಾರೆ.

---

## ಸ್ವಾತಂತ್ರ್ಯ ದಿನಾಚರಣೆ: ಪೂರ್ವ ಸಿದ್ಧತೆಗೆ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: 79ನೇ ಸ್ವಾತಂತ್ರ್ಯ ದಿನಾಚರಣೆಯ ಅರ್ಥಪೂರ್ಣ ಆಚರಣೆಗೆ ಸಕಲ ಸಿದ್ಧತೆ ಕೈಗೊಳ್ಳಬೇಕು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅಧಿಕಾರಿಗಳಿಗೆ ಸಲಹೆ ನೀಡಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ದಿನಾಚರಣೆಯಂದು ಯಾವ ಅಚಾತುರ್ಯ ಸಂಭವಿಸದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ವೇದಿಕೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮಳೆ ಹಾಗೂ ಬಿಸಿಲಿನಿಂದ ರಕ್ಷಣೆಗೆ ಕ್ರಮ ವಹಿಸುವುದು, ಶಾಲಾ ಮಕ್ಕಳಿಗೆ ಗುಣಮಟ್ಟದ ಉಪಾಹಾರ ಹಾಗೂ ಶುದ್ಧ ಕುಡಿಯುವ ನೀರು ಕಲ್ಪಿಸಬೇಕು. ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ಯೋಧರು, ಜನಪ್ರತಿನಿಧಿಗಳು, ಗಣ್ಯರು ಹಾಗು ಸಾರ್ವಜನಿಕರು ಸೇರಿ ಎಲ್ಲರಿಗೂ ಸಮರ್ಪಕವಾಗಿ ಆಸನ ವ್ಯವಸ್ಥೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.



ಎಲ್ಲಾ ಸರ್ಕಾರಿ ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಬೇಕು. ಪ್ರತಿ ಇಲಾಖೆಯವರು ತಮ್ಮ ಕಚೇರಿಗಳಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಧ್ವಜಾರೋಹಣ ನೆರವೇರಿಸಬೇಕು. ಬಳಿಕ ತಾಲ್ಲೂಕು ಕ್ರೀಡಾಂಗಣದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಶಾಲಾ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಕ್ರೀಡಾಂಗಣದವರೆಗೂ ಬಸ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪೊಲೀಸ್ ಇಲಾಖೆಯು ಪರೇಡ್ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಉಳಿದಂತೆ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ತಂಡಗಳಿಗೆ ಪೂರ್ವಭಾವಿ ತರಬೇತಿಯನ್ನು ನೀಡಿ ಸಜ್ಜುಗೊಳಿಸಬೇಕು. ಸ್ವಾತಂತ್ರ್ಯೋತ್ಸವ ಸಮಾರಂಭ ನಡೆಯುವ ವೇಳೆ ಅಗತ್ಯ ವೈದ್ಯಕೀಯ ವ್ಯವಸ್ಥೆಯನ್ನು ಮಾಡಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ವಿವಿಧ ಕ್ಷೇತ್ರಗಳಲ್ಲಿ ಶ್ರಮಿಸಿರುವ ಸಾಧಕರಿಗೆ ಸನ್ಮಾನ ವಿಚಾರದಲ್ಲಿ ಲೋಪ ಉಂಟಾಗದಂತೆ ಹಾಗೂ ಯಾವುದೇ ಒತ್ತಡಕ್ಕೆ ಮಣಿಯದೆ ಅರ್ಹರನ್ನು ಸನ್ಮಾನಿಸಬೇಕಿದೆ. ಸಮಾರಂಭವನ್ನು ಶಿಸ್ತುಬದ್ಧವಾಗಿ ಆಚರಿಸುವಂತೆ ವಿವಿಧ ಸಂಘಟನೆಯ ಕಾರ್ಯಕರ್ತರು ಸಲಹೆ-ಸೂಚನೆ ನೀಡಿದರು.

ಸ್ವಾತ್ರಂತ್ರ್ಯೋತ್ಸವ ಆಚರಣೆ ಕುರಿತು ವಿವಿಧ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಬೇಕು. ಎಲ್ಲಾ ಸಮಿತಿಗಳು ತಮಗೆ ನೀಡಿರುವ ಜವಾಬ್ದಾರಿಯನ್ನು ಪರಸ್ಪರ ಸಮನ್ವಯದಿಂದ, ಸಮರ್ಪಕವಾಗಿ ನಿರ್ವಹಿಸಿ ಕಾರ್ಯಕ್ರಮದಲ್ಲಿ ಲೋಪಗಳಾದಂತೆ ಎಚ್ಚರವಹಿಸುವಂತೆ ಸೂಚಿಸಿದರು.

ತಹಸೀಲ್ದಾರ್ ಜೆ.ಎಸ್.ಶಂಕರಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಡಿ.ಆರ್. ತ್ಯಾಗರಾಜು, ಸಿಡಿಪಿಓ ದಿನೇಶ್. ಕೆ.ಎನ್.ಅನಿಲ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಹರೀಶ್, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಧರಣೀಶ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್, ಪರಿಸರ ಪ್ರೇಮಿ ಚ.ನಾ.ಅಶೋಕ್, ಕೆಡಿಪಿ ಸದಸ್ಯರಾದ ಮಹೇಶ್ ಕಬ್ಬಾಳು, ಯೋಗೀಶ್ ಇತರರಿದ್ದರು.

# ಗೋವಿಂದ ಸ್ಮರಣೆಯೊಂದಿಗೆ ಲಕ್ಷ್ಮಿ ವೆಂಕಟರಮಣ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಮಾಲೇಕಲ್ ಅಮರಗಿರಿ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ಮಹಾ ರಥೋತ್ಸವ ಭಾನುವಾರ ಸಹಸ್ರಾರು ಭಕ್ತರ ಜಯಘೋಷಗಳೊಂದಿಗೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಮಳೆಯ ಸಿಂಚನದ ಜೊತೆಗೆ ಮುಗಿಲು ಮುಟ್ಟಿದ ಭಕ್ತರ ಗೋವಿಂದ ನಾಮ ಸ್ಮರಣೆಯೊಂದಿಗೆ ಜಾತ್ರೆ ಜರುಗಿತು. ಆಷಾಢ ಮಾಸದ ದ್ವಾದಶಿಯಂದು ವೆಂಕಟರಮಣ ಸ್ವಾಮಿಯ ರಥೋತ್ಸವ ನಡೆಯುವುದು ವಿಶೇಷ. ಜಾತ್ರಾ ಮಹೋತ್ಸವ ಅಂಗವಾಗಿ ಬೆಳಿಗ್ಗೆಯಿಂದಲೇ ತಂಡೋಪ ತಂಡವಾಗಿ ದೇವಾಲಯಕ್ಕೆ ಆಗಮಿಸಿದ ಭಕ್ತರು, ಸರತಿ ಸಾಲಿನಲ್ಲಿ ನಿಂತು ಬೆಟ್ಟದ ತಪ್ಪಲಿನಲ್ಲಿರುವ ಲಕ್ಷ್ಮಿ ಸಮೇತ ಗೋವಿಂದರಾಜ ಸ್ವಾಮಿಗೆ ಪೂಜೆ ಸಲ್ಲಿಸಿ ದರ್ಶನ ಮಾಡಿದರು. ಮತ್ತೆ ಕೆಲವು ಭಕ್ತರು ಕಡಿದಾದ ಬೆಟ್ಟವನೇರಿ ಬೆಟ್ಟದ ಮೇಲೆ ನೆಲೆಸಿರುವ ಪದ್ಮಾವತಿ ಸಮೇತನಾದ ವೆಂಕಟರಮಣ ಸ್ವಾಮಿಯ ದರ್ಶನ ಮಾಡಿ ಪುನೀತರಾದರು.

ಮಧ್ಯಾಹ್ನ ಶ್ರೀದೇವಿ-ಭೂದೇವಿ ಸಮೇತನಾದ ವೆಂಕಟ ರಮಣಸ್ವಾಮಿಯ ಉತ್ಸವ ಮೂರ್ತಿಯನ್ನು ಶೃಂಗಾರ ಮಾಡಿದ್ದ



ರಥದ ಮೇಲೆ ಪ್ರತಿಷ್ಠಾಪಿಸಿ ಮಹಾಮಂಗಳಾರತಿ ಬೆಳಗುತ್ತಿದ್ದಂತೆಯೇ ಶುಭ ಘಳಿಗೆಗಾಗಿ ಕಾಯುತ್ತಿದ್ದ ಭಕ್ತರು, ಗೋವಿಂದ ನಾಮ ಸ್ಮರಣೆಯೊಂದಿಗೆ ರಥ ಎಳೆದು ಭಕ್ತಿ ಪರವಶರಾದರು.

### ನೂತನ ದಂಪತಿಗಳಿಂದ ಪ್ರಾರ್ಥನೆ

ಶ್ರೀದೇವಿ-ಭೂದೇವಿ ಸಮೇತನಾದ ಲಕ್ಷ್ಮೀ ವೆಂಕಟರಮಣ ಸ್ವಾಮಿಯ ರಥೋತ್ಸವದಲ್ಲಿ ಪಾಲ್ಗೊಂಡು ಅಲಂಕೃತ ರಥಕ್ಕೆ ಬಾಳೆ ಹಣ್ಣು ಎಸೆದರೆ ಇಷ್ಟಾರ್ಥಗಳು ನೆರವೇರುತ್ತವೆಂಬುದು ನಂಬಿಕೆ. ಆದ್ದರಿಂದ ನೂತನ ವಧು-ವರರು ರಥೋತ್ಸವ ವೇಳೆ ತೇರಿಗೆ ಬಾಳೆ ಹಣ್ಣು ಎಸೆದು ತಮ್ಮ ಪ್ರಾರ್ಥನೆ ಸಲ್ಲಿಸಿದರು.

ರಥೋತ್ಸವ ಅಂಗವಾಗಿ ಲಕ್ಷ್ಮೀ ಹಾಗು ಗೋವಿಂದರಾಸ್ವಾಮಿಗೆ, ಬೆಟ್ಟದ ಮೇಲೆ ನೆಲೆಸಿರುವ ಪದ್ಮಾವತಿ ಸಮೇತನದ ವೆಂಕಟರಮಣ ಸ್ವಾಮಿಗೆ ಮಾಡಲಾಗಿದ್ದ ಹೂಮಾಲೆ ಅಲಂಕಾರ ಭಕ್ತರ ಕಣ್ಮನ ಸೆಳೆಯಿತು.

ಜಾತ್ರೋತ್ಸವ ಹಿನ್ನೆಲೆ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯ ಹಾಗೂ ತಪ್ಪಲಿನಲ್ಲಿರುವ ಗೋವಿಂದರಾಜಸ್ವಾಮಿ ದೇವಾಲಯಗಳನ್ನು ಸುಣ್ಣ ಬಣ್ಣಗಳಿಂದ ಸಿಂಗಾರ ಮಾಡಲಾಗಿತ್ತು. ದೇವಾಲಯದ ಆವರಣದ ಉದ್ದಗಲಕ್ಕೂ ಕಟ್ಟಿರುವ ತಳಿರು ತೋರಣ ಭಕ್ತರನ್ನ ಸ್ವಾಗತಿಸಿದವು.

ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗಿಯಾಗಿದ್ದರಿಂದ ಯಾವುದೇ ಅಹಿತರಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಹಾಗೆಯೇ ನಗರದಿಂದ 4 ಕಿ.ಮೀ ದೂರದಲ್ಲಿರುವ ಮಾಲೇಕಲ್ ತಿರುಪತಿಗೆ ಭಕ್ತರು ಹೋಗಿ ಬರಲು ಅನುಕೂಲ ಆಗುವಂತೆ ರಾಜ್ಯ ಸಾರಿಗೆ ಸಂಸ್ಥೆಯಿಂದ ಹೆಚ್ಚುವರಿ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿತ್ತು. ಪ್ರತಿವರ್ಷದಂತೆ ಈ ವರ್ಷವೂ ದೇವಾಂಗ, ಈಡಿಗ ಹಾಗು ಬ್ರಾಹ್ಮಣ ಸಮಾಜದವರು ಭಕ್ತಾದಿಗಳಿಗೆ ಸಾಮೂಹಿಕ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಿದ್ದರು.

ರಥೋತ್ಸವದಲ್ಲಿ ರಾಜ್ಯ ಗೃಹಮಂಡಳಿ ಅಧ್ಯಕ್ಷ ಹಾಗು ಶಾಸಕ ಕೆ.ಎಂ.ಶಿವಲಿಂಗೇಗೌಡ, ತಹಶೀಲ್ದಾರ್ ಸಂತೋಷ್ ಕುಮಾರ್, ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಸೇರಿ ವಿವಿಧ ಇಲಾಖೆ ಅಧಿಕಾರಿಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗು ದೇವಾಲಯದ ಅಭಿವೃದ್ಧಿ ಸಮಿತಿಯ ನಾಗರಾಜು, ತಿರುಪತಿ ಚಂದ್ರು, ಎಸ್‌ವಿಟಿ ಬಾಬು, ಪಾರುಪತ್ತೇದಾರ ಲೋಕೇಶಯ್ಯ ಸೇರಿ ಅನೇಕರು ಪಾಲ್ಗೊಂಡಿದ್ದರು.

# ಕುಷ್ಟ ರೋಗದ ಬಗ್ಗೆ ಭಯ ಬೇಡ: ಡಾ. ದೀಪಕ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಜಾವಗಲ್: ಕುಷ್ಠ ರೋಗ ಅಂಟು ರೋಗವಲ್ಲ. ರೋಗದ ಬಗ್ಗೆ ಭಯಪಡದೆ ಆರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ಪಡೆದರೆ ಸಂಪೂರ್ಣ ಗುಣಮುಖರಾಗಬಹುದು ಎಂದು ಹಂದ್ರಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಕೆ.ಆರ್.ದೀಪಕ್ ತಿಳಿಸಿದರು.

ಜಾವಗಲ್ ಹೋಬಳಿಯ ಹಂದ್ರಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಗುಡ್ಡದ ಕೆಂಗನಹಳ್ಳಿ ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ ಕುಷ್ಠ ರೋಗ ಪತ್ತೆ ಹಚ್ಚುವ ಅಭಿಯಾನ ಹಾಗೂ ಸಮೀಕ್ಷೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಶಶಿಕಿರಣ್, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಲತಾ, ಆಶಾ ಕಾರ್ಯಕರ್ತೆಯರಾದ ಲೋಲಾಕ್ಷಮ್ಮ, ಕಮಲಮ್ಮ, ಪಾರ್ವತಮ್ಮ ಹಾಗೂ ಜ್ಯೋತಿ ಅವರು ಮನೆ-ಮನೆಗೆ ತೆರಳಿ ಚಾರ್ಟ್‌ಗಳ ಮೂಲಕ ಕುಷ್ಠ ರೋಗದ ಲಕ್ಷಣಗಳು, ಮುನ್ನೆಚ್ಚರಿಕೆ ಹಾಗೂ ಚಿಕಿತ್ಸೆಯ ಕುರಿತು ವಿವರಿಸಿದರು. ಬಳಿಕ ಕುಟುಂಬದ ಎಲ್ಲಾ ಸದಸ್ಯರನ್ನು ಪರಿಶೀಲಿಸಿ ರೋಗದ ಲಕ್ಷಣಗಳಿವೆಯೇ ಎಂಬುದನ್ನು ಸಮೀಕ್ಷೆ ಮೂಲಕ ದಾಖಲಿಸಿಕೊಂಡರು.

ಆರೋಗ್ಯ ಸಿಬ್ಬಂದಿ ನಡೆಸಿದ ಮನೆ-ಮನೆ ಸಮೀಕ್ಷೆಯ ವರದಿಯನ್ನು ಪರಿಶೀಲಿಸಿದ ಡಾ. ಕೆ.ಆರ್. ದೀಪಕ್ ಅವರು, ಗುಡ್ಡದ ಕೆಂಗನಹಳ್ಳಿ ಗ್ರಾಮವನ್ನು ಕುಷ್ಠ ರೋಗ ಮುಕ್ತ ಗ್ರಾಮವೆಂದು ಘೋಷಿಸಿದರು.

ಕುಷ್ಠ ರೋಗದ ಆರಂಭಿಕ ಲಕ್ಷಣಗಳ ಕುರಿತು ಮಾಹಿತಿ ನೀಡಿದ ಡಾ. ದೀಪಕ್, ತಾಮ್ರ ಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುವುದು ಹಾಗು ಆ ಭಾಗದಲ್ಲಿ ಸ್ಪರ್ಶಜ್ಞಾನ



ಮತ್ತು ನೋವಿನ ಅನುಭವ ಇಲ್ಲದಿರುವುದು ಪ್ರಮುಖ ಲಕ್ಷಣಗಳಾಗಿವೆ ಎಂದು ಹೇಳಿದರು.

ಜೊತೆಗೆ ನರಗಳಲ್ಲಿ ಗಂಟು ಕಾಣಿಸಿಕೊಳ್ಳುವುದು, ಮುಖದ ಮೇಲೆ ನೋವಿಲ್ಲದ ಉಬ್ಬುಗಳು ಕಾಣಿಸಿಕೊಳ್ಳುವುದು, ನರಗಳು ಉಬ್ಬಿರುವಂತೆ ಕಂಡುಬರುವುದು, ನರಗಳನ್ನು ಪರೀಕ್ಷಿಸಿದಾಗ ಕಣ್ಣು ರೆಪ್ಪೆ ಹಾಗೂ ಕಣ್ಣು ಮುಚ್ಚುವಲ್ಲಿ ತೊಂದರೆ ಉಂಟಾಗುವುದು, ಮೂಗಿನ ಮಧ್ಯಭಾಗ ಚಪ್ಪಟೆಯಾಗುವುದು, ಕೈ-ಕಾಲುಗಳು ಸೆಟೆದುಕೊಳ್ಳುವುದು ಮುಂತಾದ ಲಕ್ಷಣಗಳೂ ಕಂಡುಬರಬಹುದು ಎಂದು ವಿವರಿಸಿದರು.

ಕುಷ್ಟ ರೋಗ ಬಂದರೆ ಗಾಬರಿಪಡುವ ಅಗತ್ಯವಿಲ್ಲ. ಇದು ಅಂಟು ರೋಗವಲ್ಲ. ಸೂಕ್ತ ಚಿಕಿತ್ಸೆಯಿಂದ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಕುಷ್ಟ ರೋಗಕ್ಕೆ ಉಚಿತ ಚಿಕಿತ್ಸೆ ಲಭ್ಯವಿದ್ದು, ವೈದ್ಯರ ಸಲಹೆಯಂತೆ ನಿಗದಿತ ಅವಧಿಗೆ, ಸಾಮಾನ್ಯವಾಗಿ ಆರು ತಿಂಗಳ ಕಾಲ, ಚಿಕಿತ್ಸೆಯನ್ನು ಕಡ್ಡಾಯವಾಗಿ ಪಡೆಯಬೇಕೆಂದರು.

## ಆನೆ ದಾಳಿಯಿಂದ ಗಾಯಾಳು ರೈತನ ಆರೋಗ್ಯ ವಿಚಾರಿಸಿದ ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಂತಪುರ ಗ್ರಾಮದ ನಿವಾಸಿ ಮಲ್ಲೇಶ್ ಅವರು ದನ ಮೇಯಿಸಿಕೊಂಡು ಮನೆಗೆ ಮರಳುತ್ತಿದ್ದ ವೇಳೆ ಕಾಡಾನೆಯ ದಾಳಿಗೆ ಒಳಗಾಗಿ ತೀವ್ರವಾಗಿ ಗಾಯಗೊಂಡ ಘಟನೆ ಹಿನ್ನೆಲೆಯಲ್ಲಿ ಶಾಸಕ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಚಿಕಿತ್ಸೆ ಪಡೆಯುತ್ತಿರುವ ಮಲ್ಲೇಶ್ ಅವರ ಆರೋಗ್ಯದ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದು, ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದರು. ಅಲ್ಲದೆ, ಕುಟುಂಬ ಸದಸ್ಯರನ್ನು ಭೇಟಿ ಮಾಡಿ ಧೈರ್ಯ ತುಂಬಿ, ಸರ್ಕಾರದಿಂದ ದೊರೆಯುವ ಅಗತ್ಯ ನೆರವು ಕಲ್ಪಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ, ಸಕಲೇಶಪುರ ಭಾಗದಲ್ಲಿ ಮಾನವ-ಆನೆ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ರೈತರು ಹಾಗೂ ಗ್ರಾಮಸ್ಥರು ಆತಂಕದಲ್ಲಿ ಬದುಕುವಂತಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು. ಆನೆಗಳ ಚಲನವಲನವನ್ನು ನಿಖರವಾಗಿ ಗುರುತಿಸಿ ಗ್ರಾಮಸ್ಥರಿಗೆ ಮುನ್ನೆಚ್ಚರಿಕೆ ನೀಡುವ ಉದ್ದೇಶದಿಂದ ಆನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಕಾರ್ಯವನ್ನು ಶೀಘ್ರ ಆರಂಭಿಸುವಂತೆ ಜಿಲ್ಲಾ ಅರಣ್ಯಾಧಿಕಾರಿ ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಅವರಿಗೆ ಸೂಚನೆ ನೀಡಿದರು. ಜನರ ಹಾಗೂ ವನ್ಯಜೀವಿಗಳ ಸುರಕ್ಷತೆಯನ್ನು ಸಮಾನವಾಗಿ ಗಮನದಲ್ಲಿಟ್ಟುಕೊಂಡು ಅರಣ್ಯ ಇಲಾಖೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಆಸ್ಪತ್ರೆ ಭೇಟಿ ವೇಳೆ ಸಕಲೇಶಪುರ ವಲಯ ಅರಣ್ಯಾಧಿಕಾರಿ ಹೇಮಂತ್, ವೈದ್ಯಾಧಿಕಾರಿಗಳು, ಸಾರ್ವಜನಿಕರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

# ಕಾರ್ಗಿಲ್ ವಿಜಯ್ ದಿವಸ್ ರಾಷ್ಟ್ರೀಯ ಹಬ್ಬವಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಭಾರತ-ಪಾಕಿಸ್ತಾನ ನಡುವೆ 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತ ಸಾಧಿಸಿದ ವಿಜಯದ ಸ್ಮರಣಾರ್ಥ ಆಚರಿಸುವ ಕಾರ್ಗಿಲ್ ವಿಜಯ್ ದಿವಸ್ ಅನ್ನು ರಾಷ್ಟ್ರೀಯ ಹಬ್ಬವಾಗಿ ಘೋಷಿಸಿ ತಾಲ್ಲೂಕು ಆಡಳಿತದ ಜೊತೆಗೆ ಪ್ರತಿ ಶಾಲಾ-ಕಾಲೇಜುಗಳಲ್ಲೂ ಆಚರಿಸಬೇಕೆಂದು ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಮಹಮದ್ ಕಾಲೀಥ್ ಒತ್ತಾಯಿಸಿದರು.

ಪಟ್ಟಣದ ಸುಭಾಷ್ ವೃತ್ತದಲ್ಲಿ ನಿವೃತ್ತ ಸೈನಿಕರ ಸಂಘದಿಂದ ಆಯೋಜಿಸಿದ್ದ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರು ಮಾತನಾಡಿದರು.

ಕಾರ್ಗಿಲ್ ವಿಜಯ್ ದಿವಸ್ ಭಾರತೀಯರಿಗೆ ಹೆಮ್ಮೆಯ ದಿನವಾಗಿದೆ. ದೇಶದ ರಕ್ಷಣೆಗಾಗಿ ಹೋರಾಡಿ ವೀರ ಮರಣ ಹೊಂದಿದ ಯೋಧರನ್ನು ಸ್ಮರಿಸುವುದು, ಅವರಿಗೆ ಗೌರವ ಸಮರ್ಪಿಸುವುದು ಹಾಗು ಅವರ ಆತ್ಮಕ್ಕೆ ಶಾಂತಿ ಕೋರುವುದು ಪ್ರತಿಯೊಬ್ಬ ನಾಗರಿಕನ



ಕರ್ತವ್ಯವಾಗಿದೆ ಎಂದು ಹೇಳಿದರು.

ಹುತಾತ್ಮ ಯೋಧರ ಕುಟುಂಬ ಸದಸ್ಯರಿಗೆ ನಿಮ್ಮೊಂದಿಗೆ ನಾವಿದ್ದೇವೆಂಬ ಭರವಸೆಯ ಸಂದೇಶ ನೀಡುವುದು ಸಮಾಜದ ಜವಾಬ್ದಾರಿ. ಯೋಧರಿಗೆ ಆತ್ಮಸ್ಥೈರ್ಯ ತುಂಬುವ ಜೊತೆಗೆ ಅಗತ್ಯ ಸಂದರ್ಭಗಳಲ್ಲಿ ಅವರ ಕುಟುಂಬಗಳ ನೆರವಿಗೆ ನಿಲ್ಲುತ್ತಿರುವ ದೇಶಾಭಿಮಾನಿಗಳ ಕಾರ್ಯ ಅಭಿನಂದನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಗಿಲ್ ಯುದ್ಧದ ವೀರಯೋಧರ ತ್ಯಾಗ, ಸಾಹಸ ಹಾಗೂ ದೇಶಪ್ರೇಮವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಣೆ ನಡೆಸುವುದು ಅಗತ್ಯವಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಹಾಗೂ ದೇಶಕ್ಕಾಗಿ ಸೇವೆ ಸಲ್ಲಿಸುವ ಮನೋಭಾವವನ್ನು ಬೆಳೆಸಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಸುಭಾಷ್ ವೃತ್ತದಲ್ಲಿ ವೀರ ಸೇನಾನಿ ಸುಭಾಷ್‌ಚಂದ್ರ ಬೋಸ್ ಅವರ ಪ್ರತಿಮೆ ಅನಾವರಣಗೊಳಿಸಲಾಯಿತು. ನಿವೃತ್ತ ಯೋಧರ ಸಂಘದ ಅಧ್ಯಕ್ಷ ಈಶ್ವರ್ ಅವರು ದೀಪ ಬೆಳಗಿಸಿ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಹುತಾತ್ಮ ಯೋಧರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.

ನಿವೃತ್ತ ಯೋಧ ಹೆಚ್.ಡಿ.ವಸಂತ ಕುಮಾರ್ ರಾಷ್ಟ್ರಗೀತೆ ಹಾಡಿ ಧ್ವಜವಂದನೆ ಸಲ್ಲಿಸಿದರು. ಜಾನಪದ ಕಲಾವಿದ ನಾಗರಾಜ್ ದೇಶಭಕ್ತಿ ಗೀತೆ ಹಾಡಿದರು.

ನಿವೃತ್ತ ಯೋಧರ ಸಂಘದ ಗೌರವಾಧ್ಯಕ್ಷ ಸುಭಾಷ್ ಬಾಬು, ನಿವೃತ್ತ ಸುಬೇದಾರ್ ಹೆಚ್.ಎನ್. ಚಂದ್ರಪ್ಪ, ನಿವೃತ್ತ ಯೋಧರಾದ ಮಂಜುನಾಥ್, ರವಿಕುಮಾರ್, ಮಹದೇವಯ್ಯ, ಚನ್ನಕೇಶವ, ಬಂಗಾರಿ, ಚನ್ನಬಸಪ್ಪ, ಶಿವಣ್ಣ, ರಾಜಯ್ಯ ಇತರರಿದ್ದರು.

## ಚನ್ನಮ್ಮನವರ 11ನೇ ದಿನದ ಕಾರ್ಯ: ಸಿದ್ಧತೆ ಪರಿಶೀಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ತಾಯಿ ಶ್ರೀಮತಿ ಚನ್ನಮ್ಮನವರ 11ನೇ ದಿನದ ಕಾರ್ಯ ಜು. 30ರ ಗುರುವಾರ ನೆರವೇರಲಿದ್ದು 1 ರಿಂದ 2.50 ಲಕ್ಷ ಅಭಿಮಾನಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನ ಸಮಾಧಿ ಸ್ಥಳದಲ್ಲಿ ಸಿದ್ಧತಾ ಕಾರ್ಯ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮ್ಮನವರ ಮೇಲಿನ ಅಭಿಮಾನದಿಂದ ಆತ್ಮಕ್ಕೆ ಶಾಂತಿ ಕೋರಲು ಲಕ್ಷಾಂತರ ಜನರು ಬರುತ್ತಾರೆ. ಕಾರ್ಯಕ್ರಮಕ್ಕೆ ಬರುವವರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಯಾವ ಸಮಸ್ಯೆ ಆಗದ ರೀತಿಯಲ್ಲಿ ಸಿದ್ಧತೆ ನಡೆದಿದೆ ಎಂದರು.

## ಇತಿಹಾಸದಲ್ಲಿ ಈ ದಿನ

### ಜುಲೈ-28

1914: ಆಸ್ಟ್ರಿಯಾ-ಹಂಗೇರಿ, ಸರ್ಬಿಯಾ ವಿರುದ್ಧ ಯುದ್ಧ ಘೋಷಿಸಿತು. ಇದರೊಂದಿಗೆ ಪ್ರಥಮ ವಿಶ್ವಯುದ್ಧ ಆರಂಭಕ್ಕೆ ನಾಂದಿ ಹಾಡಿತು.

1945: ಅಮೆರಿಕದ ನ್ಯೂಯಾರ್ಕ್‌ನಲ್ಲಿ ಎಂಪೈರ್ ಸ್ಟೇಟ್ ಕಟ್ಟಡಕ್ಕೆ ಬಿ-25 ಬಾಂಬರ್ ವಿಮಾನ ಡಿಕ್ಕಿ ಹೊಡೆದ ಅಪಘಾತ ಸಂಭವಿಸಿತು.

1976: ಚೀನಾದ ಟಾಂಗ್‌ಶಾನ್ ಭೂಕಂಪ ಸಂಭವಿಸಿ ಭಾರಿ ಪ್ರಮಾಣದ ಜೀವಹಾನಿಯಾಯಿತು.

**ಜನನ**

1921: ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್ ಅವರ ಸಹೋದರ ಶರತ್ ಚಂದ್ರ ಬೋಸ್

# ಹಡ್ಡಿ ಹೋಯ್!! ಹಡ್ಡಿ ಹೋಯ್!! ಅಗ್ಗಾ!! ಕುರ್ರಾ!! ಅದೂ, ಇದೂ, ಲಂಗುಲಸ್ಕು-3

**ಧನಂಜಯ ಜೀವಾಳ ಬಿ.ಕೆ.**

ಸಾಧಾರಣವಾಗಿ ಹಂದಿ ರಿಪೇರಿಯನ್ನು ನೀರಿನ ಅನುಕೂಲವಿರುವಲ್ಲಿ ಮಾಡ್ತಾರೆ. ಅಲ್ಲಿ ಸಮೀಪದಲ್ಲಿಯೇ ಕಾಡುಕಲ್ಲುಹಳ್ಳ ಹರಿಯುತ್ತಿದ್ದರಿಂದ ರಿಪೇರಿಯನ್ನು ಹಳ್ಳದ ಪಕ್ಕದ ಜೆರ್ಕೆ ಹಣ್ಣಿನ ಮರದ ಕೆಳಗೆ ಕೈಗೊಳ್ಳಲಾಯಿತು. ಶಿಕಾರಿಯ ಓಡಾಟದಿಂದ ಸುಸ್ತಾಗಿದ್ದರಿಂದ ಆ ಜೆರ್ಕೆ ಹಣ್ಣಿನ ಮರದಲ್ಲಿ ಹಣ್ಣಾಗಿ ಹೊಂಬಣ್ಣದಿಂದ ನಳನಳಿಸುತಿದ್ದ ಕ್ರಿಕೆಟ್ ಚೆಂಡಿನ ಗಾತ್ರದ ಜೆರ್ಕೆ ಹಣ್ಣುಗಳು ಆ ತಂಡದ ಹಲವರ ಹಸಿವನ್ನು ತಣಿಸಿದವು. ಈ ಹಣ್ಣುಗಳನ್ನು ಸಪೋಟಾ ಬಿಡಿಸಿದಂತೆ ಬಿಡಿಸಿ, ಬಿಸಿಲಿನಲಿ ಒಣಗಿಸಿ ಸಂಗ್ರಹಿಸಿಟ್ಟುಕೊಂಡು, ಅಗತ್ಯವಿರುವಾಗ ಬಿಸಿನೀರಿನಲ್ಲಿ ನೆನೆಸಿ, ಕಿವುಚಿ, ಹಿಂಡಿ ಅಡುಗೆ ಪದಾರ್ಥಗಳಿಗೆ ಹುಳಿಯನ್ನಾಗಿ ಬಳಸುತ್ತಾರೆ. ಮಲೆನಾಡಿನ ಅಡುಗೆಗೆ ವಿಶಿಷ್ಟ ರುಚಿಯ ಮೆರುಗನ್ನು ನೀಡುವ ಈ ಜೆರ್ಕೆ ಹುಳಿಯ ಬಳಕೆ ಮಾಂಸಾಹಾರ ಸಿದ್ಧತೆಯಲ್ಲಿ ಬಳಕೆಯಾಗುತ್ತದೆ. ಪಕ್ಕದ ಕಲಾಯಿಪರ್ಬುಗಳ ತೋಟದಿಂದ ಬಾಳಲೆಯನ್ನು ಮಾಂಸ ಕಡಿಯುವ ಹಂಪಿಗೆ ಹಾಸಿಕೊಳ್ಳಲು ಹಾಗೂ ಸಿದ್ಧವಾದ ಮಾಂಸವನ್ನು ಕಟ್ಟಲು ತರಲಾಯಿತು. ಬಾಳೆಲೆ ತರಲು ಹೋದವರು ಬರುವಾಗ ತಂದ ಬಿಳುಲ್ಲಿನಿಂದ ಬೆಂಕಿ ಮಾಡಿ ಹಂದಿಯನ್ನು ಸುಟ್ಟು ಹೆರೆಯಲಾರಂಭಿಸಿದರು. ಹಂದಿ ಹೆರೆದು ಶುಚಿಗೊಳಿಸುವುದರಲ್ಲಿ ಎಕ್ಸ್‌ಪರ್ಟ್‌ಗಳಾದ ಫ್ರಾನ್ಸಿ, ನಾಗರಾಜ ಮತ್ತು ನಾರಾಯಣಗೌಡನ ಉಸ್ತುವಾರಿಯಲ್ಲಿ ಹಂದಿಯ ಹೊಟ್ಟೆ ತೆರೆದಾಗ ಗೋಚರಿಸಿದ್ದು, ಇತ್ತೀಚೆಗಷ್ಟೇ ರೂಪು ತಳೆಯುತ್ತಿದ್ದ ಏಳು ಹಂದಿ ಮರಿಗಳು. ಇನ್ನು ಇದು ಎಲ್ಲರಿಗೂ ತಿಳಿದರೆ ಮನಸ್ಸಿಗೆ ಬೇಸರವಾಗಿ ಯಾರೂ ಮಾಂಸ ತಿನ್ನುವುದಿಲ್ಲವೆಂದರಿತು ಸುಬ್ಬ, ಮೋಣಪ್ಪನನ್ನು ಕರೆದು, ಈ ಮರಿಚೀಲವನ್ನು ಎಲ್ಲಾದ್ರು ಎಸೆದು ಬಾ ಎಂದ. ಕಾಡಿನೊಳಗೆ ಎಸೆದರೆ ನಾಯಿಗಳು ಎಳೆದಾಡಿ ರಗಳೆ ಮಾಡುತ್ತವೆ ಎಂದುಕೊಂಡು ಮೋಣಪ್ಪ ಮರಿಚೀಲವನ್ನು ಹಳ್ಳದೊಳಗಿನ ಬಂಡೆಕಲ್ಲಿನ ಸಂದಿಗೆ ಎಸೆದುಬಿಟ್ಟ. ಅತ್ತ ಹಂದಿ ರಿಪೇರಿಯಾಗುತ್ತಿತ್ತು; ಕೋವಿಪಾಲು, ನಾಯಿಪಾಲು, ಒದರಿದವರ ಪಾಲು, ಈಡಿನ ಪಾಲು ಮುಂತಾದವನ್ನು ಹಾಕಲಾಯ್ತು. ಅತ್ತ ಚೋಳಿಕೆರೆ ತೋಟದ ಯಾವುದೋ ಹನಾಲಿನಲ್ಲಿ ಹುಟ್ಟುವ ಈ ಕಾಡಕಲ್ಲು ಹಳ್ಳ ಬೆಕ್ಕಿನಗದ್ದೆ ಹಡ್ಲಿನ ಮೂಲಕ ಹರಿದು ನೀರ್ಗಂಡಿಯನ್ನು ಸೇರುತ್ತಿತ್ತು.



ನೂರಾರು ಎಕರೆ ಗದ್ದೆ, ತೋಟಗಳಿಗೆ ನೀರಿನ ಮೂಲವಾಗಿದ್ದ ಈ ಹಳ್ಳ ನಕ್ಯಾದ ಜೀವನಾಧಾರವಾಗಿತ್ತು. ನೀರಿನ ಮೂಲಗಳ ಅಗತ್ಯ ಮೌಲ್ಯಗಳನ್ನರಿಯದವರು ಪಲ್ಪರ್ ತ್ಯಾಜ್ಯಗಳನ್ನು ಕುಡಿಯುವ ನೀರಿಗೆ ಬಿಡುತ್ತಾ ಅನಾಹುತಕ್ಕೆ ದಾರಿಮಾಡಿಕೊಡುತ್ತಿದ್ದರು. ದನಕರುಗಳಿಗೂ ಕುಡಿಯಲು ನೀರು ಒದಗಿಸಲಾಗದೆ ಅಮೂಲ್ಯ ಗೋವುಗಳನ್ನು ಕಟುಕರಿಗೆ ಮಾರುತ್ತಿದ್ದರು. ಈ ಕಾಡುಕಲ್ಲುಹಳ್ಳಕ್ಕೆ ಈ ಹೆಸರು ಬರಲು ಕಾರಣ ಈ ಹಳ್ಳದುದ್ದಕ್ಕೂ ಇರುವ ಲಕ್ಷಾಂತರ ಕಲ್ಲುಗಳು.

**ಗ್ರಾಮಾಯಣ-32**

ಇತ್ತ ಬಡಿಗೆಯ ಮೇಲೆ ಮೂಳೆಯನ್ನು ಇಟ್ಟು ಖಡಖಡಕ್ಕೆಂದು ಕಡಿಯುತ್ತಿದ್ದಂತೆ ಅತ್ತ ಹಳ್ಳದ ಕೆಳಗಿಂದ ಅಯ್ಯವ್ವಾಟಿಟಿ ಎಂಬ ಉದ್ಗಾರ ಕೇಳಿ ಬಂತು. ಏನಾಯ್ತಪ್ಪಾ ಅಂದ್ರೆ, ಒದರಲು ಬಂದಿದ್ದ ತನ್ನು ಹಳ್ಳದ ನೀರಿನ ನಡುವೆ ಗರಬಡಿದವನಂತೆ ನೆಟ್ಟಗೆ ನಿಂತುಬಿಟ್ಟಿದ್ದಾನೆ! ಚಂದ್ರ ಹಳ್ಳದ ನೀರಿನಲ್ಲಿ ಏಡಿ ಹಿಡಿಯುತ್ತಿದ್ದವನು ದೊಡ್ಡ ಏಡಿಯೊಂದು ದರಿನೊಳಗೆ ಸೇರಿಕೊಂಡಿದ್ದರಿಂದ ಭುಜದವರೆಗೂ ಕೈನೀಡಿ ಪಕ್ಷಿಮರದ ಬೇರಿನಸಂದಿಯಲ್ಲಿ ಕೈಯಾಡಿಸುತ್ತಿದ್ದ. ಬಡ್ಡಿಮಗಂದು ಏಡಿ ಒಮ್ಮೆ ಈ ಮೂಲೆ, ಒಮ್ಮೆ ಆ ಮೂಲೆ ಎಂದು ಅಡಗಿಕೊಳ್ಳುತ್ತಾ ಆಟವಾಡಿಸುತ್ತಿತ್ತು. ಇದ್ದಕ್ಕಿದ್ದಂತೆ ಅವನ ಕೈಬೆರಳಿಗೆ ಮೆತ್ತನೆಯದೇನೋ ಲೋಳೆಲೋಳೆಯಾಗಿ ತಾಕಲಾರಂಭಿಸಿ, ಕೈಗೆ ಸಿಗದೆ ನುಣುಚಿಕೊಳ್ಳುತ್ತಿತ್ತು. ಆ ಹಳ್ಳದಲ್ಲಿ ವಿಶೇಷ ರೀತಿಯ ಕೊರೆಮೀನುಗಳು ಇದ್ದುದರಿಂದ ಖುಷಿಯಾಗಿ ಚಂದ್ರ ಕೆಸರಿನೊಳಗೆ ಮಂಡಿಯೂರಿ ಕೈಯನ್ನು ಇನ್ನೂ ನೀಡಿ ಹಿಡಿಯಲು ಪ್ರಯತ್ನಿಸುತ್ತಿದ್ದ. ಏ ಚಂದ್ರ, ಏನಷ್ಟು ತಾರಾಡ್ತಿದ್ದೀಯಾ; ನಿನ್ ಕೈ ಉದ್ದ ಕಡಿಮೆ; ಈಚೆ ಬಾ, ನಾನು ಹಿಡಿತೀನಿ ಎಂದ ತನ್ನು. ಕೊರೆ ಮೀನಿನಂಗೆ ಕಾಣುತ್ತೆ ನನ್ಮಗಂದು ಕೈಗೇ ಸಿಕ್ತಿಲ್ಲ ಎಂದ ಚಂದ್ರ ತನ್ನುಗೆ ಅವಕಾಶ ಮಾಡಿಕೊಟ್ಟ. ಕೈ ಹಾಕಿ ಹರಸಾಹಸ ಮಾಡಿದ ತನ್ನು ಇದು ಕೊರೆ ಮೀನಂಗೆ ಕಾಣ್ತಾ ಇಲ್ಲ, ಉದ್ದ ಇರೋದ್ರಿಂದ ಹಾವ್ಮೀನಿರಬೇಕೆಂದ. ಬಹಳ ಹೊತ್ತು ಮುಡುಗಾಡಿದ ನಂತರ ಈ ದರ ಮರದಬೇರು ಹೋದಷ್ಟೂ ದೂರ ಹೋದಂಗಿದೆ ಮಾರಾಯ. ಇದರ ಮೈಮೇಲೆ ಮುಳ್ ಇದ್ದಂಗೆ ಕಾಣ್ತಿಲ್ಲ, ದೊಡ್ಡ ಕೊರೆ ಮೀನೇ ಇರ್ಬೇಕು ಎಂದ. ಹಾಗೂ ಹೀಗೂ ಮಾಡಿ ಸಿಕ್ತು ಮಾರಾಯ, ಲೌಡಿ ಮಗಂದು ಎಷ್ಟು ಆಟಾಡಿಸ್ತು, ಅಷ್ಟೇನೂ ದಪ್ಪ ಇರಂಗೆ ಕಾಣ್ತಿಲ್ಲ ಎಂದು ಹೊರತೆಗೆದು ಕೈಯಲ್ಲಿದ್ದುದನ್ನು ನೋಡಿದವನೇ ಚೀತ್ಕರಿಸಿ ಕೈಕೊಡವಿ ಕರೆಂಟು ಹೊಡೆದವನಂತೆ ಹಾತರಿಸಿ ಹಾಗೇ ನಿಂತೇ ಇದ್ದ. ತನ್ನು ಅಷ್ಟೊತ್ತು ಮುಡುಗಾಡಿ ಹಿಡಿದದ್ದು ಭರ್ಜರಿ ಗಾತ್ರದ ನೀರಹಾವು!!!!!

ಹಂದಿ ತೊಂಡು ಕಡಿಯುತ್ತಿದ್ದನ್ನು ಸುತ್ತಲೂ ನಿಂತು ನೋಡುತ್ತಿದ್ದವರು ಅನೇಕರು ಚಂದ್ರನಲ್ಲಿಗೆ ಹೋಗಿ ವಿಚಾರಿಸಲಾಗಿ, ವಿಷಯ ತಿಳಿದು ಅಚ್ಚರಿಪಡುತ್ತಲೇ ಬಿದ್ದು ಬಿದ್ದು ನಗಲಾರಂಬಿಸಿದರು. ಅಷ್ಟರಲ್ಲಾಗಲೇ ಚಂದ್ರ ಹಾಗೂ ತನ್ನು ನೂರೈವತ್ತಕ್ಕೂ ಹೆಚ್ಚು ಏಡಿಗಳನ್ನು ಹಿಡಿದಿದ್ದರು. ಏಡಿ ಹಿಡಿಯುವವರ ಗದ್ದಲದಲ್ಲಿ ಹಾವು ದರಿನೊಳಗೆ ಬಂದಿಯಾಗಿ ಪರದಾಡಿತ್ತು. ಅಂದಿನಿಂದ ಚಂದ್ರನಾಗಲೀ, ತನ್ನು ಆಗಲೀ ನೀರಿಗಿಳಿದು ಏಡಿ, ಮೀನು ಹಿಡಿಯಲು ಯತ್ನಿಸಿದ್ದು ಊರವರ ಕಿವಿಗೆ ಬಿದ್ದಿಲ್ಲ.

ಅಲ್ಲಿದ್ದವರಿಗೆಲ್ಲಾ ಅಚ್ಚರಿ! ಅದ್ಹೇಗೆ ಈ ಬಡ್ಡಿಮಕ್ಳು ಈಟೊಂದೊಡ್ಡಿ ಕಲ್ಲೇಡಿ ಹಿಡಿದಿದ್ದಾರಲ್ಲ ಎಂದು ಒಳಗೊಳಗೇ ಹೊಟ್ಟೆ ಉರಿದುಕೊಂಡರು. ಮೋಣಪ್ಪ ಎಸೆದಿದ್ದ ಮರಿಚೀಲದಿಂದ ಸ್ರವಿಸಿದ ರಕ್ತ ಹಳ್ಳದ ನೀರಿನಲ್ಲಿ ನಿಧಾನವಾಗಿ ಬೆರೆತು ಹರಿಯಲಾರಂಭಿಸಿತ್ತು. ಕಲ್ಲಿನ ಸಂದಿ, ದರಿನೊಳಗೆ ಅಡಗಿಕೊಂಡಿದ್ದ ಏಡಿಗಳು ರಕ್ತ, ಮಾಂಸದ ವಾಸನೆ ರುಚಿಗೆ ನಿಧಾನವಾಗಿ ಮೇಲ್ಮುಖವಾಗಿ ತೆವಳಲಾರಂಭಿಸಿದ್ದವು. ಸುಮ್ಮನೇ ಕುಳಿತು, ಹಂದಿಮಾಂಸ ರೆಡಿಯಾಗುವುದನ್ನೇ ಕಾಯುತ್ತಿದ್ದ ತನ್ನು ನೋಡನೋಡುತ್ತಿದ್ದಂತೆ ದೊಡ್ಡ ದೊಡ್ಡ ಕಲ್ಲೇಡಿಗಳು ಗುಂಪುಗುಂಪಾಗಿ ಹಳ್ಳದ ತೆಳುನೀರಿನಲ್ಲಿ ಚಲಿಸುತ್ತಿದ್ದುದನ್ನ ಕಂಡ. ಹತ್ತಿರದಲ್ಲಿಯೇ ಇದ್ದ ಚಂದ್ರನನ್ನು ಕೂಗಿ ಕರೆದ ತನ್ನು ಅವನೊಂದಿಗೆ ಸೇರಿ ತಮಗೆ ಸುಸ್ತಾಗುವಷ್ಟು ದೊಡ್ಡ ದೊಡ್ಡ ಕಲ್ಲೇಡಿಗಳನ್ನು ಹಿಡಿದುಕೊಂಡಿದ್ದರು.

ಅಷ್ಟರಲ್ಲಾಗಲೇ ಅಶೋಕ ಎರಡು ಕ್ಯಾನ್ ಭಟ್ಟಿ ಶರಾಬನ್ನು ತಂದು ಕ್ವಾರ್ಟರಿಗೆ ಐದು ರೂಪಾಯಿಯಂತೆ ಎಲ್ಲರಿಗೂ ಸಪ್ಲೈ ಮಾಡಿದ. ಇತ್ತ ಸುಮಾರು ಹದಿನೈದು ಕೇಜಿ ಮಾಂಸವನ್ನು ಅಲ್ಲಿಯೇ ಹುರಿದು ಎಲ್ಲರೂ ನಾಲಿಗೆ ಚಪ್ಪರಿಸುತ್ತಾ ಜಡಿದರು. ಬಾಳಲೆಯ ಮೇಲಿದ್ದ ಜಂಡನ್ನೂ ಸಹ ಬಿಡದೆ ಬಳಿಬಳಿದು ತಿಂದು ಶರಾಬು ಗುಟುಕರಿಸುತ್ತಾ ಕ್ಯಾಕರಿಸಿ ಆಸ್ವಾದಿಸುತ್ತಿದ್ದರು. ಆ ಬೆಂಕಿಯಲ್ಲಿಯೇ ಹತ್ತಾರು ಏಡಿಗಳನ್ನು ಸುಟ್ಟುಕೊಂಡು ಶಿಕಾರಿಯ ಬೋನಸ್‌ನ್ನು ಪಡೆದು ಊರ ಕಡೆ ಪಯಣ ಬೆಳೆಸಿದರು. ಊರಿನ ಹೆಬ್ಬಾಗಿಲಲ್ಲಿ ಫಾರೆಸ್ಟ್ ಜೀಪ್ ನಿಂತಿದೆ ಎಂಬ ಸುದ್ದಿ ಕೇಳಿ ತಿಂದಿದ್ದ ತೊಂಡೆಲ್ಲಾ ಕುಣಿದಾಡಲಾರಂಭಿಸಿದವು.

(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248